

ದಾರಿಯಲ್ಲಿ ಆಗಾಗ ತನ್ನ ಕೈ ಬೆರಳುಗಳನ್ನು ನೋಡಿಕೊಳ್ಳುತ್ತಾ ರಸ್ತೆ ಮರೆತವನಂತೆ ಎತ್ತೆತ್ತಲೋ ನಡೆಯುತ್ತಿದ್ದ.

ಪರಸಪ್ಪ ಕೋಪ, ದುಃಖ, ತಿರಸ್ಕಾರಗಳ ಮಧ್ಯೆ ಸಿಕ್ಕಿಹಾಕಿಕೊಂಡು ಸೋತು ಹೋಗಿದ್ದ. ಇಡೀ ಜಗತ್ತು ಕಾರ್ಡುವೊಂದನ್ನು ಮುಂದೆ ಇಟ್ಟುಕೊಂಡು ತನ್ನ ಮೇಲೆ ಸಂಚು ಹೂಡಿದೆಯೇನೋ ಅನಿಸತೊಡಗಿತ್ತು ಅವನಿಗೆ.

ಮನೆಗೆ ಬಂದು ಗಿರಿಜಿಗೆ ಹೇಳಿದಾಗ ಅವಳು ಮತ್ತೊಮ್ಮೆ ರೇಗಿದ್ದಳು. 'ನನ್ನ ಹೆಸರು ಹಾಕ್ಸಿಕೊಂಡು ರೇಷನ್ ಕಾರ್ಡು ಮಾಡಿಸಿಕೊಂತೀನಿ.. ನಿಮ್ದು ಯಾವಾಗ ಬರುತ್ತೊ ಬರ್ಲಿ. ಆಗ ಸೇರಿಸುವಾ.. ಸುಮ್ನೆ ಬರೊ ಅಕ್ಕಿಗೂ ಯಾಕೆ ಕಲ್ಲು ಹಾಕಿಕೊಳ್ಳೋದು...' ಎಂಬ ತೀರ್ಮಾನ ಹೊರಹಾಕಿದ್ದಳು. ಏನೆಂದೂ ಹೇಳದೆ ಪರಸಪ್ಪ ಸುಮ್ಮನೆ ಕೂತಿದ್ದ.

ಯಾರೋ ಹೇಳಿದ್ರು ಅಂತ ತಾಲ್ಲೂಕು ಕಚೇರಿಯಲ್ಲಿ ಕೆಲ್ಸ ಮಾಡ್ತಿದ್ದ ಪಕ್ಕದೂರಿನ ಶೇಖರಿ ಹತ್ರ 'ಯಾಕೊ ಕಾರ್ಡೇ ಬರ್ತಿಲ್ಲ.. ಎರಡ್ಮೂರು ಸರಿ ಹಿಂಗೆ ಆಗೇತಿ...' ಅಂತ ಕೇಳಿದ್ದ. 'ಜಿಲ್ಲಾ ಕಚೇರಿಗೆ ಒಮ್ಮೆ ಹೋಗಿ ಬಾ.. ಹಿಂಗೆ ಅಂತ ಹೇಳು. ಬೆರಳು ಗುರುತು ಮೂಡದೆ ಇದ್ರೆ ಕಣ್ಣಿಂದೆ ಫೈನಲ್ ಮಾಡಿ ತಗೊಬಹುದು, ಇಲ್ಲ ಅಂದರೆ ನಿಮ್ಮ ಮನೆಯವರ ಆಧಾರ್ ಜೊತೆ ಸೇರಿಸಿಕೊಡಬಹುದು.. ಎಲ್ಲದಕ್ಕೂ ದಾರಿ ಇದೆ. ಸರಿಯಾಗಬಹುದು...' ಎಂದು ಸಲಹೆ ನೀಡಿದ್ದನು ಶೇಖರಿ. ಅವರ ಮಾತಿನಿಂದ ಸಮಾಧಾನವಾದಂತಾಗಿ ಚೂರು ಗೆಲುವಾಗಿದ್ದ. ಊರಿನಲ್ಲಿ ಕೆಲವರು 'ಪರಸಾ ಹಗಲು ರಾತ್ರಿ ಟ್ರ್ಯಾಕ್ಟ್ರಿ ಹೊಡೀತಾ ಇದ್ರೆ ಕೈಯಗೆ ಗೆರೆ ಹೆಂಗಲೇ ಉಳಿತಾವೆ.. ಸ್ವಲ್ಪ ದಿನ ಟ್ರ್ಯಾಕ್ಟ್ರಿ ಹೊಡೆಯೋದು ಬಿಟ್ಟು ಆಧಾರ್ ಮಾಡ್ಸು ಸರಿ ಆಗಬಹುದು' ಅಂತ ಸಲಹೆ ನೀಡಿದ್ದರು.

ಶೇಖರಿ ಹಾಗೆ ಹೇಳಿದ ಮರುದಿನವೇ ಜಿಲ್ಲಾ ಕೇಂದ್ರ ಶಿವಮೊಗ್ಗದ ಬಸ್ಸು ಹತ್ತಿದ್ದ. ಅಲ್ಲೆಲ್ಲೋ ಹುಡುಕಾಡಿ, ಯಾರನ್ನೊ ಕೇಳಿ ಕೇಳಿ ಕೊನೆಗೂ ಕಚೇರಿ ತಲುಪಿದ್ದ. ಇದುವರೆಗಿನ ಕಾರ್ಡಿನ ಕುರಿತಾದ ತನ್ನೆಲ್ಲಾ ಕಷ್ಟಗಳನ್ನು ಅವರ ಬಳಿ ಹೇಳಿಕೊಂಡಿದ್ದ. 'ನೀವೇನು ವರಿ ಮಾಡ್ಬೇಡಿ. ಇನ್ನೊಂದು ಸರಿ ಅಲ್ಲೇ ಮಾಡ್ಸಿ. ಬರಲಿಲ್ಲ ಅಂದರೆ ಆಮೇಲೆ ಬರ್ರಿ ನೊಡೋಣ...' ಎಂದು ಹೇಳಿ ಕಳುಹಿಸಿದ್ದರು. ಕಚೇರಿಯಲ್ಲಿ ಕೂತಿದ್ದವರು ಕೂಡ ಊರಿನಲ್ಲಿ ಆಧಾರ್ ಕಾರ್ಡು ತೆಗೆಯುವ ಹುಡುಗನಂತೆಯೇ ಕಂಡರು.